





ಕ್ಷೇತ್ರವೂ ತ್ವರಿತವಾದ ಮುನ್ನಡೆಯನ್ನು ಸಾಧಿಸಿ – ವಿಮಾನಗಳ ವಿನ್ಯಾಸ, ವೇಗ, ಹಾರುವ ಎತ್ತರ ಹಾಗೂ ಸುರಕ್ಷತೆ, ಇವೂ ಗಮನಾರ್ಹವಾಗಿ ಸುಧಾರಿಸಿದವು. ಸೇನಾ ಕ್ಷೇತ್ರ ಇವುಗಳನ್ನು ಅವಲಂಬಿಸುವುದು ಹೆಚ್ಚಿತು.

1930ರ ದಶಕದಲ್ಲಿ ಬ್ರಿಟನ್, ಜರ್ಮನಿ, ಫ್ರಾನ್ಸ್, ಅಮೆರಿಕ, ರಷ್ಯಾ ಹಾಗೂ ಜಪಾನ್‌ಗಳಲ್ಲಿ ವೈರಿಯ ವಿಮಾನಗಳ ಮೇಲೆ ದಾಳಿಮಾಡುವ, ವೈರಿದೇಶದ ಮೇಲೆ ಬಾಂಬ್ ಎತ್ತಿಹಾಕುವ ಹಾಗೂ ಸೈನಿಕರನ್ನು ಹಾಗೂ ಸರಕನ್ನು ಸಾಗಿಸುವ ವಿಮಾನಗಳು ತಯಾರಾದವು. ಪ್ರಯಾಣಿಕರು, ಅಂಚೆ ಮತ್ತು ಸರಕನ್ನು ಸಾಗಿಸುವ ವಿಮಾನಗಳೂ ಸಾರ್ವಜನಿಕ ಕ್ಷೇತ್ರದಲ್ಲಿ ಬಳಕೆಗೆ ಬಂದವು. ಆಶ್ಚರ್ಯವೆಂದರೆ, ಮೂವತ್ತರ ದಶಕದ ಸುಮಾರಿಗೆ ನಿರ್ಮಾಣವಾದ 'ಡಿ ಸಿ –3 ಡಕೋಟಾ' ವಿಮಾನ ಇಂದೂ ಜಗತ್ತಿನ ಕೆಲವೆಡೆ ವಿರಳವಾಗಿ ಬಳಕೆಯಲ್ಲಿದೆ.

## ಜೆಟ್ ಯುಗದ ಆರಂಭ

1950ರ ದಶಕದ ಸುಮಾರಿಗೆ ಜೆಟ್ ಯಂತ್ರ ಎಂಬ ಒಂದು ಬಗೆಯ ವಿಮಾನದ ಎಂಜಿನ್ ವಿಮಾನಯಾನ ಕ್ಷೇತ್ರದಲ್ಲಿ ಮಹತ್ತರವಾದ ಬದಲಾವಣೆಯನ್ನು ತಂದಿತು. ಆ ಮೊದಲು ಪ್ರೊಪೆಲ್ಲರ್‌ಗಳನ್ನು ತಿರುಗಿಸುವ ಅಂತರ್ದಹನ 'ಪಿಸ್ಟನ್' ಯಂತ್ರಗಳು (ಇವು ನಮ್ಮ ಸ್ಕೂಟರ್ ಹಾಗೂ ಕಾರುಗಳ ಎಂಜಿನ್‌ಗಳನ್ನು ಕೆಲಮಟ್ಟಿಗೆ ಹೋಲುವಂತವು) ವಿಮಾನಗಳಲ್ಲಿ ಬಳಕೆಯಲ್ಲಿದ್ದವು. ವೇಗವೂ ಸೇರಿದಂತೆ ಅನೇಕ ವಿಧಗಳಲ್ಲಿ ಪಿಸ್ಟನ್ ಯಂತ್ರಕ್ಕಿಂತ ಉತ್ತಮವಾದ ಜೆಟ್ ಯಂತ್ರವನ್ನು ಸೇನಾ ಹಾಗೂ ಸಾರ್ವಜನಿಕ ವಿಮಾನಗಳೆರಡೂ ಅಳವಡಿಸಿಕೊಂಡವು. ಇದರಿಂದಾಗಿ, ಹಡಗೊಂದರಲ್ಲಿ ಒಂದು ತಿಂಗಳ ಅವಧಿ ಬೇಡುತ್ತಿದ್ದ ಪಯಣ ಒಂದು ದಿನದಲ್ಲೇ ಮುಗಿಯುವುದು ವಿಮಾನಯಾನದ ಮೂಲಕ ಸಾಧ್ಯವಾಯಿತು. ಸಾರ್ವಜನಿಕ ವಿಮಾನಸಾರಿಗೆ ಕ್ಷೇತ್ರ ಬೃಹತ್ತಾಗಿ ಬೆಳೆಯಲಾರಂಭಿಸಿತು. ಜಗತ್ತಿನಾದ್ಯಂತ ಲಕ್ಷಾಂತರ ಜನ ಸರ್ಕಾರಿ ಕೆಲಸಕ್ಕಾಗಿಯೋ, ವಾಣಿಜ್ಯದ ಉದ್ದೇಶದಿಂದಲೋ, ಉನ್ನತ ಶಿಕ್ಷಣಕ್ಕಾಗಿಯೋ ತಮ್ಮ ದೇಶದೊಳಗೆ ಹಾಗೂ ಇತರ ದೇಶಗಳಿಗೆ ವಿಮಾನಗಳ ಮೂಲಕ ತೆರಳುವುದು ಸಾಮಾನ್ಯ ಎನ್ನುವಂತಾಯಿತು.

ಪ್ರಯಾಣಿಕ ವಿಮಾನಗಳ ಪೈಕಿ, ಸುಮಾರು 200–250 ಪ್ರಯಾಣಿಕರನ್ನು ಸಾಗಿಸಬಲ್ಲ ಅಮೇರಿಕಾದ 'ಡಿ ಸಿ 8' ಹಾಗೂ 'ಬೋಯಿಂಗ್ 707'—ಈಎರಡುವಿಮಾನಗಳು1960ರದಶಕದ ಪ್ರಮುಖ ಪ್ರಯಾಣಿಕ ವಿಮಾನಗಳಾಗಿದ್ದವು. ಇಂತಹ ವಿಮಾನಗಳು ವಿಮಾನ ಪ್ರಯಾಣವನ್ನು ಜನಪ್ರಿಯಗೊಳಿಸಿದರೂ, ಅವುಗಳಲ್ಲಿ ಪಯಣಿಸುವುದು ಸಾಕಷ್ಟು ದುಬಾರಿಯಾಗಿತ್ತು. ಜೊತೆಗೇ, ವಿಮಾನಗಳ ಸಂಖ್ಯೆ ಹೆಚ್ಚುತ್ತಾ ಹೋಗಿ ವಿಮಾನ ನಿಲ್ದಾಣಗಳಲ್ಲಿನ ದಟ್ಟಣೆಯನ್ನು ನಿಭಾಯಿಸುವುದೂ ಕಷ್ಟವಾಗಲಾರಂಭಿಸಿತ್ತು. ಆಗ ಎದುರಾದ ಪ್ರಶ್ನೆ: 'ಬೋಯಿಂಗ್ 707'ರ ಎರಡು ಪಟ್ಟು ಪ್ರಯಾಣಿಕರನ್ನು ಕೊಂಡೊಯ್ಯಬಲ್ಲ ವಿಮಾನವೊಂದನ್ನು ನಿರ್ಮಿಸಲು ಸಾಧ್ಯವಾದರೆ?

ಈ ಯೋಚನೆ ಅಂದಿನ ವಿಶ್ವವಿಖ್ಯಾತ ವಿಮಾನ ಸಾರಿಗೆ ಸಂಸ್ಥೆಯಾದ 'ಪ್ಯಾನ್ ಆಮ್'ನ ಮುಖ್ಯಸ್ಥ ವಾನ್ ಟ್ರಿಪ್ ಅವರಿಗೆ ಹೊಳೆದು, ಅದನ್ನವರು ತಮ್ಮ ಸ್ನೇಹಿತರಾದ ಬೋಯಿಂಗ್ ಕಂಪನಿಯ ಮುಖ್ಯಸ್ ಬಿಲ್ ಅಲನ್ ಅವರಿಗೆ ತಿಳಿಸಿದರು. 500 ಪ್ರಯಾಣಿಕರನ್ನು ಕೊಂಡೊಯ್ಯುವ ವಿಮಾನವನ್ನು ನಿರ್ಮಿಸುವುದು ಬೋಯಿಂಗ್‌ಗೆ ಸಾಧ್ಯವಾದಲ್ಲಿ, ಆ ಮಾದರಿಯ ಮೊದಲ 25 ವಿಮಾನಗಳನ್ನು ಖರೀದಿಸುವುದಾಗಿ ಅಲನ್ ಅವರಿಗೆ ವಾನ್ ಟ್ರಿಪ್ ಆಶ್ವಾಸನೆ ನೀಡಿದರು. ಹೀಗೆ ಪ್ರಾರಂಭವಾಯಿತು 'ಬೋಯಿಂಗ್ 747' ವಿಮಾನದ ಕಥೆ.

## ಜಂಬೋ ಜೆಟ್‌ನ ಜನನ

ದೈತ್ಯ ವಿಮಾನದ 230 ಅಡಿ ಉದ್ದವಿರುವ ದೇಹವನ್ನು, 196 ಅಡಿಗಳಷ್ಟು ವ್ಯಾಪಿಸಿರುವ ರೆಕ್ಕೆಗಳನ್ನು, ರಕ್ಕಸ ಜೆಟ್ ಎಂಜಿನ್‌ಗಳನ್ನು, ಮೊದಲಿಗೆ ವಿನ್ಯಾಸ ಮಾಡುವುದು, ನಂತರ ನಿರ್ಮಿಸುವುದು ಅತ್ಯಂತ ಸವಾಲೆನ್ನಿಸುವ ಕೆಲಸವಾಯಿತು.

ಆ ವೇಳೆಯಲ್ಲಿ ಅನೇಕರು ವಿಮಾನಯಾನದ ಮುಂದಿನ ಹಂತ 'ಧ್ವನ್ಯಾತೀತ' (ಸೂಪರ್‌ಸಾನಿಕ್) ವೇಗದಲ್ಲಿ ಹಾರುವ, ಅಂದರೆ ಕಡಿಮೆಯೆಂದರೂ ಗಂಟೆಗೆ ಸುಮಾರು 3000 ಕಿ.ಮೀ. ವೇಗದಲ್ಲಿ ಹಾರುವ ವಿಮಾನಗಳ ನಿರ್ಮಾಣ ಎಂದು ನಂಬಿದ್ದರು. ಇಂತಹ ಪರಿಸ್ಥಿತಿಯಲ್ಲಿ 500 ಪ್ರಯಾಣಿಕರನ್ನು ಸಾಗಿಸುವ ಸಾಮರ್ಥ್ಯವಿದ್ದರೂ, ಗಂಟೆಗೆ ಕೇವಲ 900 ಕಿಲೋಮೀಟರ್ ವೇಗದಲ್ಲಿ ಸಾಗುವ ನಿಧಾನಗತಿಯ 'ಬೋಯಿಂಗ್ 747' ವಿಮಾನ ಪ್ರಯಾಣಿಕ ವಿಮಾನವಾಗಿ ಯಶಸ್ಸನ್ನು


ಎವರೆಟ್‌ನಲ್ಲಿರುವ 'ಬೋಯಿಂಗ್ 747' ವಿಮಾನಗಳ ಕಾರ್ಖಾನೆಯ ಪಕ್ಷಿನೋಟ